**ಸಾಕ್ಷಿಗೆ ದಿನಾಂಕಃ 24.11.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಆರೋಪಿ ಪರ ಶ್ರೀ. KSS ವಕೀಲರಿಂದಃಃ**

ನಾನು ಕೃಷಿಕ. ನಾನು ಟ್ರಾವೆಲ್ ಏಜೆನ್ಸಿ ಇಟ್ಟುಕೊಂಡಿಲ್ಲ. ನಾನು ಒಂದು ದ್ವಿಚಕ್ರ ವಾಹನವನ್ನು ಇಟ್ಟುಕೊಂಡಿದ್ದೇನೆ. ನಾನು ಪದವೀಧರನಾಗಿರುತ್ತೇನೆ. ಹಾಲಂದೂರು ಗ್ರಾಮ ಬಾಳೆಹೊನ್ನೂರಿನಿಂದ ಸುಮಾರು 35 ಕಿ ಮೀ ದೂರದಲ್ಲಿದೆ. ಚಾಸಾ-1 ಮತ್ತು ಚಾಸಾ-6 ನನ್ನ ಸ್ನೇಹಿತರು ಮತ್ತು ಸಹಪಾಠಿಗಳು. ಚಾಸಾ-5 ನನಗೆ ಪರಿಚಯವಿರುತ್ತಾರೆ. ಚಾಸಾ-1 ಮತ್ತು ನಾನು ರವರು ಘಟನೆ ದಿನದಂದು ಚಿಕ್ಕಮಗಳೂರಿಗೆ ಹೋಗಿದ್ದೆವು. ನಾವು ಚಿಕ್ಕಮಗಳೂರಿನಿಂದ ಕೆ ಎಸ್ ಆರ್ ಟಿ ಸಿ ಬಸ್ಸಿನಲ್ಲಿ ಸುಮಾರು ಸಂಜೆ 6.30 ಗಂಟೆಗೆ ಹೊರಟೆವು. ನಾವು ಬಾಳೆಹೊನ್ನೂರಿನಲ್ಲಿ ಸದರಿ ಬಸ್ಸಿನಿಂದ ಇಳಿದೆವು. ನಾವು ಬಸ್ ಟಿಕೆಟನ್ನು ಬಾಳೆಹೊನ್ನೂರಿಗೆ ಪಡೆದುಕೊಂಡಿದ್ದೆವು. ನಾವು ಬಾಳೆಹೊನ್ನೂರು ಬಸ್ ನಿಲ್ದಾಣದಲ್ಲಿ ಇಳಿದು ಬರುವ ಸಂದರ್ಭದಲ್ಲಿ ನನಗೆ ಚಾಸಾ-5 ರವರು ಮೊಬೈಲ್ ಕರೆ ಮಾಡಿದರು. ನಾವು ಬಸ್ಸು ಇಳಿದು ಕಾಲು ಗಂಟೆ ನಂತರ ಊಟಕ್ಕೆ ಹೋದೆವು ಆ ಸಂದರ್ಭದಲ್ಲಿ ಚಾಸಾ-5 ರವರು ನಮ್ಮ ಜೊತೆ ಬಂದರು. ಚಾಸಾ-5 ರವರು ಬಾಳೆಹೊನೂನರಿಗೆ ಹೇಗೆ ಬಂದರು ಎಂದು ನಾನು ನೋಡಿರುವುದಿಲ್ಲ. ಸೌಂದರ್ಯ ಹೋಟೆಲ್ ನಲ್ಲಿ ಬಾರ್ ವ್ಯವಸ್ಥೆ ಇರುವ ಬಗ್ಗೆ ನನಗೆ ಗೊತ್ತಿಲ್ಲ.

ಆರೋಪಿತರು ಮೂಲತಃ ಶೃಂಗೇರಿಯಲ್ಲಿರುವ ವಿದ್ಯಾರಣ್ಯಪುರ ಗ್ರಾಮ ಪಂಚಾಯಿತ್ತಿ ಸದಸ್ಯರು ಎಂದರೆ ಸರಿ. ಆರೋಪಿತರು ಮಾಹಿತಿ ಹಕ್ಕು ಕಾಯಿದೆ ಅಡಿಯಲ್ಲಿ ಅರ್ಜಿ ಸಲ್ಲಿಸಿ ಕೆಲವು ಅಧಿಕಾರಿಗಳ ಬಗ್ಗೆ ದಾಖಲೆಗಳನ್ನು ಪಡೆದುಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಾವು ಘಟನಾ ದಿನದಂದು ಊಟ ಮಾಡಿ ಹೊರಗೆ ಬಂದ ಸಮಯದಲ್ಲಿ ಆರೋಪಿತರು ಎಲ್ಲಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿತರು ಯಾವ ವಾಹನದಲ್ಲಿ ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಘಟನಾ ದಿನದಂದು ಆ ಸಮಯದಲ್ಲಿ ಸುಮಾರು 15.20 ಜನರು ಇದ್ದರು. ಸದರಿ ಸ್ಥಳದಲ್ಲಿದ್ದ ಜನರನ್ನು ಪೊಲೀಸರು ವಿಚಾರಿಸಿರುವುದಿಲ್ಲ. ಎಂಒ-1 ಯಾವ ಕಂಪನಿಯ ಬಿಯರ್ ಬಾಟಲಿಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಘಟನಾ ಸ್ಥಳಕ್ಕೆ ಬಂದಿರಲಿಲ್ಲ. ಚಾಸಾ-1 ರವರನ್ನು ನಾನು ಮತ್ತು ಚಾಸಾ-5 ರವರು ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಆ ಸಂದರ್ಭದಲ್ಲಿ ಚಾಸಾ-1 ರವರಿಗೆ ಪ್ರಜ್ಞೆ ಇತ್ತು ಮತ್ತು ಅವರು ಮಾತನಾಡುತ್ತಿದ್ದರು. ಆಸ್ಪತ್ರೆಯಿಂದ ಪೋನ್ ಮಾಡಿದ ಬಳಿಕ 3 ಜನ ಪೊಲೀಸರು ಆಸ್ಪತ್ರೆಗೆ ಬಂದರು. ಆ ಸಂದರ್ಭದಲ್ಲಿ ನಾನು ಆಸ್ಪತ್ರೆಯಲ್ಲಿದ್ದೆ. ಅಲ್ಲಿಗೆ ಪಿ ಎಸ್ ಐ ರವರು ಬರಲಿಲ್ಲ. ಚಾಸಾ-1 ರವರ ಹೇಳಿಕೆಯನ್ನು ಯಾವ ಪೊಲೀಸರು ದಾಖಲು ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ. ನಿಪಿ-1 ದೂರಿಗೆ ಯಾರು

ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ತದನಂತರ ನಾನು ಚಾಸಾ-1 ಮತ್ತು 5 ರವರು ಆಸ್ಪತ್ರೆಯಿಂದ ಶೃಂಗೇರಿಗೆ ಹೋದೆವು. ಆ ದಿನ ನಾವು ಯಾರು ಸಹ ಪೊಲೀಸ್ ಠಾಣೆಗೆ ಹೋಗಲಿಲ್ಲ. ತದನಂತರ ಪೊಲೀಸ್ ಠಾಣೆಗೆ ಹಾಜರಾಗಲು ಪೊಲೀಸರು ನನಗೆ ನೋಟೀಸು ನೀಡಿರುವುದಿಲ್ಲ. ಮರುದಿನ ಪೊಲೀಸ್ ಠಾಣೆಗೆ ನಾನು, ನೂತನ್, ನಮ್ಮ ಸಂಬಂಧಿಕರು ಬಂದಿದ್ದೆವು. ಆ ಸಂದರ್ಭದಲ್ಲಿ ಪೊಲೀಸರು ದಾಖಲೆಗೆ ಸಹಿ ಮಾಡಿಸಿಕೊಂಡರು.

ಘಟನಾ ಸ್ಥಳದ ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ನಿಪಿ-2 ಮಹಜರಿಗೆ ಪಂಚ ಸಾಕ್ಷಿದಾರನಾಗಿ ಬರಲು ಪೊಲೀಸರು ನನಗೆ ಯಾವುದೇ ನೋಟೀಸು ನೀಡಿರುವುದಿಲ್ಲ. ಆ ಸಂದರ್ಭದಲ್ಲಿ ನಾನು, ಚಾಸಾ-2, 3 ಮತ್ತು 5 ಮತ್ತು ಪೊಲೀಸರು ಹಾಜರಿದ್ದೆವು. ಚಾಸಾ-2 ಮತ್ತು 3 ರವರನ್ನು ಅಲ್ಲಿಗೆ ಯಾರ ಕರೆತಂದರು ಎಂದು ನನಗೆ ಗೊತ್ತಿಲ್ಲ. ನಿಪಿ-2 ರಲ್ಲಿ ನಮೂದಿಸಿರುವ ಅಂಶಗಳನ್ನು ನನಗೆ ಹೇಳಲು ಆಗುವುದಿಲ್ಲ. ಸಾಕ್ಷಿ ಮುಂದುವರೆದು ಆ ಸಂದರ್ಭದಲ್ಲಿ ನಾನು ತೋರಿಸಿದಂತೆ ಸ್ಥಳದಲ್ಲಿ ಬಿದ್ದಿದ್ದ ಒಂದು ಬಿಯರ್ ಬಾಟಲಿಯನ್ನು ಜಪ್ತು ಮಾಡಿಕೊಂಡರು. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಸ್ಥಳ ಮತ್ತು ಅಮಾನತು ಪಂಚನಾಮೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ವಿಚಾರ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ-3 ರಲ್ಲಿ ಯಾವುದೇ ಬಿಯರ್ ಬಾಟಲಿ ಕಾಣುತ್ತಿಲ್ಲ ಎಂದರೆ ಸರಿ. ನಿಪಿ-3 ರಲ್ಲಿ ಸೌಂದರ್ಯ ಹೋಟೆಲ್ ಎಂಬ ನಾಮಫಲಕವಿರುವ ಹೋಟೆಲ್ ಕಾಣಿಸುತ್ತಿಲ್ಲ ಎಂದರೆ ಸರಿ. ನಿಪಿ-3 ಪೋಟೋವನ್ನು ಯಾರು ತೆಗೆದರು ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನಗೆ ಸದರಿ ಸ್ಥಳದಲ್ಲಿ ನಿಲ್ಲಲು ಹೇಳಿದ್ದರಿಂದ ನಾನು ನಿಂತುಕೊಂಡೆ ಎಂದರೆ ಸಾಕ್ಷಿಯು ಅಲ್ಲಿ ಮಹಜರ್ ಮಾಡಿದ್ದರಿಂದ ನಾನು ಅಲ್ಲಿ ನಿಂತುಕೊಂಡು ಪೋಟೋ ತೆಗೆಸಿಕೊಂಡೆ ಎಂದು ನುಡಿಯುತ್ತಾರೆ. ನಿಪಿ-3 ಕ್ಕೂ ಮಹಜರಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಃಃ ಮರು ವಿಚಾರಣೆ ಇಲ್ಲಃಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಓ

ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ